'ರಕ್ತಚಂದನ'ದ ಹಸ್ತಪ್ರತಿ ಸಿಗದಿರುವುದು ದೊಡ್ಡ ನಷ್ಟವೇನೂ ಇಲ್ಲ. ಯಾಕೆಂದರೆ, ಚಾರುದತ್ತರು ಅದಾಗಲೇ ಎಲ್ಲವನ್ನೂ ನನಗೆ ವಿವರಿಸಿ ದಾಖಲು ಮಾಡಿದ್ದರು. 'ರಕ್ತಚಂದನ' ಎಂಬುದು ಚಾರುದತ್ತರಿಗೆ ನಾನು ಅರ್ಪಿಸುವ ಶ್ರದ್ಧಾಂಜಲಿ. ಅದು ಅವರ ಜೀವನ ಚರಿತ್ರೆಯಾದರೂ ಬರೆದವಳು ನಾನು ಎಂಬ ಹೆಮ್ಮೆ ನನ್ನದು' ಎಂದು ಮತ್ತೆ ಅಳಲು ಶುರುಮಾಡಿದ್ದಳು.

ನನಗೂ ಇವಳು ಸುಳ್ಳು ಬುರುಕಿ, ಏನೋ ನಾಟಕ ಮಾಡುತ್ತಿದ್ದಾಳೆ ಅನಿಸಿತು. ಅಟ್ಟದಲ್ಲಿ 'ರಕ್ತಚಂದನ'ದ ಹಸ್ತಪ್ರತಿ ಸಿಗದಿದ್ದರೆ ಇವಳು ಸ್ವಂತ ಬರೆಯುವುದುಂಟಾ? ಇವಳು ಕದ್ದಿರುವುದು ನಿಜ. ಆದರೆ, ಸುಳ್ಳು ಹೇಳುತ್ತಿದ್ದಾಳೆ. ಚಾರುದತ್ತರ ಸಾವೂ, ಇವಳ ಅಳುವೂ ಎಲ್ಲ ಕಲಸುಮೇಲೋಗರವಾಗಿ ಮಟಮಟ ಮಧ್ಯಾಹ್ನ ನಿದ್ದೆ ಮಾಡಲು ನೋಡಿದ್ದೆ.

ಕನಸಿನಲ್ಲಿ ತೀರಿಹೋದ ಚಾರುದತ್ತರೇ ಬಂದಿದ್ದರು.

ಅವರ ಪ್ರಕಾರ ಸ್ಟೂಲಿನಿಂದ ಅವಳೇ ಬಿದ್ದಿದ್ದಲ್ಲ. ಇವರು ಬೀಳಿಸಿದ್ದು.

ನಿದ್ದೆ ಹೋಗಿದ್ದ ಚಾರುದತ್ತರಿಗೆ ವಿಲಾಸಿನಿ ಅಟ್ಟ ಹತ್ತಲು ಸ್ಟೂಲು ಎಳೆದ ಸದ್ದಿಗೆ ಎಚ್ಚರಾಗಿತ್ತು. ಕಣ್ಣುಬಿಟ್ಟು ನೋಡಿದರೆ ಅವಳು ಸ್ಟೂಲು ಹತ್ತಿ ಅಟ್ಟದೊಳಕ್ಕೆ ತಲೆ ಹಾಕಿದ್ದಳು. ಅವರು ಮಲಗಿದ್ದಲ್ಲಿಂದಲೇ ಸ್ಟೂಲಿಗೆ ಮೆಲ್ಲಗೆ ಕಾಲಿನಿಂದ ಒದ್ದಿದ್ದರು ಅಷ್ಟೇ.

ವಿಲಾಸಿನಿ ಜೋರಾಗಿ ಕಿರುಚಿಕೊಂಡು ಕೆಳಕ್ಕೆ ಬಿದ್ದಿದ್ದಳು.

'ನನಗೆ ಅರಿವಿಲ್ಲದೆ ನನ್ನ 'ರಕ್ತಚಂದನ'ವನ್ನು ಅಪಹರಿಸಲು ಹೋದರೆ ನಾನು ಬಿಡುತ್ತೇನಾ. ಅದಕ್ಕೇ ಅವಳ ಮೂಳೆ ಮುರಿದೆ' ಅಂದಿದ್ದರು.

'ಅದರಲ್ಲಿ ಬಾಂಬು ಇದೆ ಮಾರಾಯಾ. ಅದೇನಾದರೂ ತಿದ್ದುಪಡಿಯಿಲ್ಲದೆ ಹೊರಗೆ ಬಂದರೆ ನನ್ನ ಬದುಕು ಮೂರು ಕಾಸಾಗುತ್ತದೆ' ಅಂದಿದ್ದರು.

ತಿದ್ದುಪಡಿಯಿಲ್ಲದ ಅದನ್ನು ಒಂದು ಸಲ ಓದಿಬಿಡಬೇಕು ಎನ್ನುವುದು ನನ್ನ ಬಯಕೆಯಾಗಿತ್ತು.

ಅದಕ್ಕೆ ವಿಲಾಸಿನಿಯ ಸಹಾಯ ಬೇಕಿತ್ತು, ಅವಳಲ್ಲದೆ ಇನ್ನು ಯಾರು ಚಾರುದತ್ತರನ್ನು ಮರಳು ಮಾಡಬಲ್ಲರು? ಹಾಗಾಗಿ ಆ ಗುಟ್ಟನ್ನು ಅವಳಿಗೆ ಅರುಹಿಬಿಟ್ಟಿದ್ದೆ.

ಅವಳು ನಮ್ಮ ಯೋಜನೆಯನ್ನು ಕಾರ್ಯಗತಗೊಳಿಸಲು ಹೋಗಿದ್ದಳು. ಹೋದವಳು ಬೆನ್ನು ಮುರಿಸಿಕೊಂಡು ಹಾಸಿಗೆ ಹಿಡಿದು ಮಲಗಿದ್ದಳು.

ಅದಾಗಿ ಮೂರು ತಿಂಗಳಿಗೆ ಚಾರುದತ್ತರೇ ತೀರಿ ಹೋಗಿದ್ದರು.

'ಕದಿಯಲು ಇವಳನ್ನು ನಾನು ಬಿಟ್ಟಿಲ್ಲ. ಹಾಗಾದರೆ ಇವಳು ಪ್ರಕಟಿಸುತ್ತಿರುವ 'ರಕ್ತಚಂದನ'ದ ಕಥೆ ಎಂತಹದು?'

ಇದು ತೀರಿಹೋದ ಮೇಲೂ ಅವರ ಚಿದಂಬರ ಪ್ರಶ್ನೆ.

'ಹಾಳಾದ ಇವಳು ಅದರಲ್ಲಿ ಏನೇನು ಬರೆದಿರಬಹುದು?'

'ಮಾರಾಯಾ, ಅವಳು ಹಿಡಿದಿರುವ ಇಕ್ಕುಳದಿಂದಲೇ ನೀನು ಅವಳನ್ನು ಹಿಡಿಯಬೇಕು.'

ಚಾರುದತ್ತರದು ಬದುಕಿರುವಾಗಲೂ ಇಂತಹದೇ ಉಪಮೆಗಳು.

ಅವರೇ ಹೇಳಿದ್ದು ಈ ಕಥೆ.

ಒಬ್ಬ ದಾರಿಯಲ್ಲಿ ಕುಳಿತು ಜೋರಾಗಿ ಹೂಂಕರಿಸುತ್ತಿದ್ದನಂತೆ. ಹತ್ತಿರ ಹೋಗಿ ನೋಡಿದರೆ ಆತ ತನ್ನ ಗುಹ್ಯಸ್ಥಾನದ ಕೂದಲನ್ನು ಒಂದು ಬೆಟ್ಟದ ತುದಿಯ ಕೋಡಿಗೆ ಕಟ್ಟಿ ಜೋರಾಗಿ ಎಳೆಯುತ್ತಿದ್ದನಂತೆ.

'ಇದೇನು ಮಾರಾಯಾ ನಿನಗೆ ಹುಚ್ಚಾ?' ಅಂತ ಒಬ್ಬರು ಕೇಳಿದರಂತೆ.

ಅದಕ್ಕೆ ಆತ ನಿರ್ಲಿಪ್ತನಾಗಿ ಹೇಳಿದನಂತೆ,

'ಬಂದರೆ ಒಂದು ದೊಡ್ಡ ಬೆಟ್ಟ. ಹೋದರೆ ಕೆಲಸಕ್ಕೆ ಬಾರದ ಕೂದಲು'.